ಗಂಗಾ ಕಲ್ಯಾಣ ಯೋಜನೆಯ ಮಾಹಿತಿ

231 (275) ಶ್ರೀ ವಸಂತ ಬಂಗೇರ ಕೆ. (ಬೆಳ್ತಂಗಡಿ) ಮಾನ್ಯ ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಮೂಲಕ ಗಂಗಾ ಕಲ್ಯಾಣ ಯೋಜನೆಯಲ್ಲಿ 2006–07, 2007–08 ಮತ್ತು 2008–09ರಲ್ಲಿ ಅಲ್ಪಸಂಖ್ಯಾತರ ಮತ್ತು ಹಿಂದುಳಿದ ವರ್ಗದವರಿಗೆ ಕೊಳವೆ ಬಾವಿಗಾಗಿ ಮಂಜೂರಾದ ಫಲಾನುಭವಿಗಳ ಸಂಖ್ಯೆ ಎಷ್ಟು; (ವರ್ಷವಾರು ವಿವರ ನೀಡುವುದು)

ಆ) ಅವುಗಳಲ್ಲಿ ಎಷ್ಟು ಫಲಾನುಭವಿಗಳ ಕೊಳವೆ ಬಾವಿಗಳನ್ನು ಕೊರೆಯಲಾಗಿದೆ; ಎಷ್ಟು ಫಲಾನುಭವಿಗಳ ಜಾಗದಲ್ಲಿ ಕೊಳವೆ ಬಾವಿಯನ್ನು ಕೊರೆಯುವುದು ಬಾಕಿ ಇರುತ್ತದೆ;

ಇ) ನೀರಿನ ಕೊರತೆ ಅಥವಾ ಇತರೆ ಕಾರಣಗಳಿಗಾಗಿ ಎಷ್ಟು ಅರ್ಜಿಗಳನ್ನು ತಿರಸ್ಕರಿಸಲಾಗಿದೆ?

ಪ್ರೊ. ಡಾ: ಮುಮ್ತಾಜ್ ಅಲಿ ಖಾನ್ (ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು):

ಅ) ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಗಂಗಾಕಲ್ಯಾಣ ಯೋಜನೆಯಡಿಯಲ್ಲಿ 2006–07, 2007–08, 2008–09ರ ಸಾಲಿನಲ್ಲಿ ಒಟ್ಟಾರೆ 5701 ಒಟ್ಟು ಕೊಳವೆ ಬಾವಿಗಳನ್ನು ಮಂಜೂರು ಮಾಡಲಾಗಿದೆ

ವರ್ಷವಾರು ವಿವರ

2006–07	=	2054
2007–08	=	2282
2008–09	=	821
ಒಟ್ಟು	=	**5157**

ಆ) ನಿಗಮದಿಂದ ಮಂಜೂರಾದ ಕೊಳವೆ ಎಲ್ಲಾ ಫಲಾನುಭವಿಗಳಿಗೆ ಕೊಳವೆ ಬಾವಿಗಳನ್ನು ಕೊರೆಯಲಾಗಿದೆ. ಯಾವುದೇ ಬಾಕಿ ಇರುವುದಿಲ್ಲ.

ಇ) ಯಾವುದೇ ಅರ್ಜಿಗಳನ್ನು ತಿರಸ್ಕರಿಸಲಾಗಿಲ್ಲ.